ಗಾಗೀಯಂತ್ರ

ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 967
ಮಾನ್ಯ ಸದಸ್ಯರ ಹೆಸರು : ಶ್ರೀ ಆರ್ ಬಿ ತಿಮ್ಮಾಪೂರ (ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ : 20.09.2021
ಉತ್ತರಿಸುವ ಸಚಿವರು : ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ	ಬಾಗಲಕೋಟೆ ಜಿಲ್ಲೆಯಲ್ಲಿ ಕೋವಿಡ್-19 ನಿಂದಾಗಿ ಮೃತರಾದವರ ಸಂಖ್ಯೆ ಎಷ್ಟು; (ತಾಲ್ಲೂಕುವಾರು ಹೆಸರು, ವಿಳಾಸವಾರು ಮಾಹಿತಿಗಳನ್ನು ಒದಗಿಸುವುದು)	ದಿನಾಂಕ: 01-03-2020 ರಿಂದ 16-09-2021 ರವರೆಗೆ ರಾಜ್ಯದಲ್ಲಿನ ಕೋವಿಡ್-19 ಸೋಂಕಿನಿಂದ ಮೃತಪಟ್ಟವರ ವಿವರ ತಾಲ್ಲೂಕುವಾರು ಈ ಕೆಳಕಂಡಂತಿದೆ. (see table below)
ಆ	ಒಂದು ಲಕ್ಷ ರೂಪಾಯಿಗಳ ಪರಿಹಾರ ಕೋರಿ ಎಷ್ಟು ಅರ್ಜಿಗಳು ಬಂದಿವೆ; ಈವರೆಗೆ ಎಷ್ಟು ಜನರಿಗೆ ಪರಿಹಾರ ನೀಡಲಾಗಿದೆ;	ಕೋವಿಡ್-19ನಿಂದ ಮೃತ ಹೊಂದಿದ ಬಿ.ಪಿ.ಎಲ್ ಕುಟುಂಬದ ದುಡಿಯುವ ವ್ಯಕ್ತಿಯ ಕುಟುಂಬಕ್ಕೆ ಪರಿಹಾರ ವಿತರಣೆಗೆ ಕುರಿತಂತೆ ಬಾಗಲಕೋಟೆ ಜಿಲ್ಲೆಯಲ್ಲಿ ಒಟ್ಟು 38 ಅರ್ಜಿಗಳು ಸ್ವೀಕೃತವಾಗಿರುತ್ತದೆ. ಪರಿಹಾರ ಕೋರಿಕೆ ಅರ್ಜಿಗಳ ಕ್ಷೇತ್ರ ಪರಿಶೀಲನಾ ಕಾರ್ಯಪ್ರಗತಿಯಲ್ಲಿದ್ದು, ವರದಿ ಆಧಾರದ ಮೇಲೆ ಪರಿಹಾರ ವಿತರಿಸಲಾಗುವುದು.
ಇ	ಪರಿಹಾರ ನೀಡಲು ಅನುಸರಿಸುತ್ತಿರುವ ಮಾನದಂಡಗಳೇನು?	ಕೋವಿಡ್-19ರ ಮೃತ ಪರಿಹಾರ ನೀಡಲು ಮಾನದಂಡಗಳು ಈ ಕೆಳಕಂಡಂತಿದೆ. • ವ್ಯಕ್ತಿಯು ಕೋವಿಡ್ ನಿಂದ ಮೃತಪಟ್ಟಿರಬೇಕು. • ಬಿ.ಪಿ.ಎಲ್ ಕುಟುಂಬಕ್ಕೆ ಸೇರಿರಬೇಕು. • ದುಡಿಯುವ ಸದಸ್ಯನಾಗಿರಬೇಕು.

ಕ್ರ ಸಂ	ತಾಲ್ಲೂಕು	1ನೇ ಅಲೆಯಲ್ಲಿನ ಮರಣಗಳು	2ನೇ ಅಲೆಯಲ್ಲಿನ ಮರಣಗಳು	ಒಟ್ಟು ಮರಣಗಳು
1	ಬಾಗಲಕೋಟೆ	42	73	115
2	ಬಾದಾಮಿ	22	14	36
3	ಹುನಗುಂದ	13	18	31
4	ಜಮಖಂಡಿ	23	18	41
5	ಮುಧೋಳ	21	29	50
6	ಬೀಳಗಿ	8	19	27
7	ಇತರೆ	7	23	30
	ಒಟ್ಟು	**136**	**194**	**330**

ಆಕುಕ 114 ಎಸ್‌ಬಿವಿ 2021

(ಡಾ|| ಕೆ. ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು